## ಕರ್ನಾಟಕ ವಿಧಾನಪರಿಷತ್ತಿನ ದ್ವೈವಾರ್ಷಿಕ ಚುನಾವಣೆ 2014.
## ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ.

| ಕ್ರ.ಸಂ. | ಕ್ಷೇತ್ರದ ಹೆಸರು | ಚುನಾವಣಾಧಿಕಾರಿಯ ಪದನಾಮ | ಮತಕ್ಷೇತ್ರದ ವ್ಯಾಪ್ತಿ | ಒಟ್ಟು ಮತದಾರರ ಸಂಖ್ಯೆ | ಒಟ್ಟು ಮತಗಟ್ಟೆಗಳ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 1 | ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ | ಧಾರವಾಡ, ಹಾವೇರಿ, ಗದಗ, ಮತ್ತು ಉತ್ತರ ಕನ್ನಡ ಜಿಲ್ಲೆಗಳು | 94,356 | 133 |
| 2 | ಕರ್ನಾಟಕ ಆಗ್ನೇಯ ಪದವೀಧರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು | ಚಿತ್ರದುರ್ಗ, ದಾವಣಗೆರೆ(ಚೆನ್ನಗಿರಿ, ಹೊನ್ನಾಳಿ ಹಾಗೂ ಹರಪನಹಳ್ಳಿ ತಾಲ್ಲೂಕು ಹೊರತುಪಡಿಸಿ) | 98,037 | 101 |
| 3 | ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಗುಲಬರ್ಗಾ ವಿಭಾಗ, ಗುಲಬರ್ಗಾ | ಬೀದರ್, ಗುಲಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು | 31,809 | 105 |
| 4 | ಬೆಂಗಳೂರು ಶಿಕ್ಷಕರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು | ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳು | 36,957 | 48 |

- ಈ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ನೀಡಿರುವುದಿಲ್ಲ.
- ಮತಪತ್ರಗಳನ್ನು ಗುಲಾಬಿ(pink) ಬಣ್ಣದ ಹಾಳೆಯಲ್ಲಿ ಮುದ್ರಿಸಲಾಗಿರುತ್ತದೆ.
- ಈ ಚುನಾವಣೆಯಲ್ಲಿ ಸಾಂಪ್ರದಾಯಿಕ ಮತಪೆಟ್ಟಿಗೆಗಳನ್ನು ಬಳಸಲಾಗುತ್ತಿದೆ.
- ಪ್ರತಿ ಮತಗಟ್ಟೆಗೆ ಓರ್ವ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಮೂವರು ಪೋಲಿಂಗ್ ಅಧಿಕಾರಿಗಳನ್ನು ನೇಮಕಮಾಡಲಾಗಿರುತ್ತದೆ. ಈ ಅಧಿಕಾರಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳಾಗಿದ್ದು, ಸಾಮಾನ್ಯವಾಗಿ ಪತ್ರಾಂಕಿತ (ಗೆಜೆಟೆಡ್) ಅಧಿಕಾರಿಯನ್ನು ಪ್ರಿಸೈಡಿಂಗ್ ಅಧಿಕಾರಿಯಾಗಿ ನೇಮಕಮಾಡಲಾಗಿರುತ್ತದೆ.
- ಪ್ರತಿಯೊಬ್ಬ ಮತದಾರನು ಮತಚಲಾಯಿಸಲು ಮತಗಟ್ಟೆಗೆ ಬಂದಾಗ ಆತ/ಆಕೆಗೆ ಮತದಾನ ಮಾಡಲು ಅನುಮತಿ ನೀಡುವ ಮುನ್ನ ಅವರ ಗುರುತನ್ನು ಸ್ಥಿರೀಕರಿಸಲು ಹಾಜರ ಪಡಿಸುವ ದಾಖಲೆಗಳ ಸಮೇತ ಅವರನ್ನು ವಿಡಿಯೋ ಚಿತ್ರೀಕರಣ ಮಾಡಲಾಗುವುದು.

- ಎಲ್ಲಾ ಮತದಾರರು ತಮ್ಮೊಂದಿಗೆ ತಮ್ಮ ಭಾವಚಿತ್ರವುಳ್ಳ ಮತದಾರರ ಗುರುತಿನ ಕಾರ್ಡಅನ್ನು (EPIC) ತೋರಿಸಬೇಕಾಗುತ್ತದೆ.
- ತಮ್ಮ EPICನ್ನು ತೋರಿಸಲು ಸಾದ್ಯವಾಗದೇ ಇರುವ ಮತದಾರರು ಪರ್ಯಾಯವಾಗಿ ಚುನಾವಣಾ ಆಯೋಗದಿಂದ ಆದೇಶಿಸಿರುವ ಈ ಕೆಳಕಂಡ ಯಾವುದಾದರೊಂದು ದಾಖಲೆಯನ್ನು ತಮ್ಮ ಗುರುತನ್ನು ಸಾಬೀತುಪಡಿಸಲು ಹಾಜರಪಡಿಸಬೇಕು.

    i. ಪಾಸ್‌ಪೋರ್ಟ್.
    ii. ಡ್ರೈವಿಂಗ್ ಲೈಸೆನ್ಸ್,
    iii. ಕೇಂದ್ರ / ರಾಜ್ಯ ಸರ್ಕಾರ, ಸಾರ್ವಜನಿಕ ವಲಯದ ಉದ್ಯಮಗಳು ಹಾಗೂ ಸಾರ್ವಜನಿಕ ವಲಯದ ನಿಯಮಿತ ಕಂಪನಿಗಳು ನೀಡಿರುವ ಭಾವಚಿತ್ರವನ್ನೊಳಗೊಂಡ ಸೇವಾಗುರುತಿನ ಕಾರ್ಡ್,
    iv. ದಿನಾಂಕ 31-5-2014ಕಿಂತ ಮುನ್ನ ಬ್ಯಾಂಕ್/ಅಂಚೆ ಕಛೇರಿಯು ನೀಡಿರುವ ಭಾವಚಿತ್ರವನ್ನೊಳಗೊಂಡ ಪಾಸ್‌ಬುಕ್,
    v. ಆದಾಯತೆರಿಗೆಯ ಗುರುತಿನ ಕಾರ್ಡ್ (PAN Card),
    vi. ಆಧಾರ್ ಕಾರ್ಡ್,
    vii. ರಾಷ್ಟ್ರೀಯ ಜನಸಂಖ್ಯಾ ರೆಜಿಸ್ಟ್ರಿ (NPR)ಅಡಿ ರೆಜಿಸ್ಟ್ರಾರ ಜೆನರಲ್ ಆಫ್ ಇಂಡಿಯ(RGI) ನೀಡಿರುವ ಸ್ಮಾರ್ಟ್ ಕಾರ್ಡ್,
    viii. ದಿನಾಂಕ 31-5-2014ರ ವರೆಗೆ ಕಾರ್ಮಿಕ ಯೋಜನೆಯಡಿ ನೀಡಿರುವ ಭಾವಚಿತ್ರವನ್ನೊಳಗೊಂಡ ಆರೋಗ್ಯ ವಿಮಾ ಯೋಜನೆ ಸ್ಮಾರ್ಟ್ ಕಾರ್ಡ್,
    ix. ದಿನಾಂಕ 31-5-2014ರ ವರೆಗೆ ನೀಡಿರುವ ಭಾವಚಿತ್ರವನ್ನೊಳಗೊಂಡ ಪಿಂಚಣಿ ದಾಖಲೆ,
    x. ಭಾವಚಿತ್ರವನ್ನೊಳಗೊಂಡ ಸ್ವಾತಂತ್ರ್ಯ ಹೋರಾಟಗಾರರ ಗುರುತಿನ ಕಾರ್ಡ್,
    xi. ದಿನಾಂಕ 31-5-2014ರ ವರೆಗೆ ನೀಡಿರುವ ಭಾವಚಿತ್ರವನ್ನೊಳಗೊಂಡ ಶಸ್ತ್ರಾಸ್ತ್ರ ಪರವಾನಿಗೆ (Arms License),
    xii. ದಿನಾಂಕ 31-5-2014ರ ವರೆಗೆ ನೀಡಿರುವ ಭಾವಚಿತ್ರವನ್ನೊಳಗೊಂಡ ಅಂಗವಿಕಲರ ಗುರುತಿನ ಕಾರ್ಡ್,
    xiii. ಭಾವಚಿತ್ರವನ್ನೊಳಗೊಂಡ ಮಾಜಿ ಸೈನಿಕರ ಸಿಎಸ್‌ಡಿ ಕ್ಯಾಂಟೀನ್ ಕಾರ್ಡ್;

- ನಕಲಿ ಮತದಾನ ತಡೆಯಲು ಪ್ರತಿ ಮತದಾರರನ್ನು ಗುರುತಿಸಿದ ನಂತರ ಪ್ರತಿ ಮತದಾರನ ಎಡಗೈ ತೋರ್‌ಬೆರಳ ಮೇಲೆ ಅಳಿಸಲಾಗದ ಶಾಹಿಯ ಗುರುತನ್ನು ಹಾಕಲಾಗುವುದು.
- ವಾಸ್ತವವಾಗಿ ಆಯ್ಕೆಯಾಗಬೇಕಾಗಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಪರಿಗಣಿಸದೇ ಪ್ರತಿ ಮತದಾರನು, ಚುನಾವಣೆಯಲ್ಲಿ ಸ್ಪರ್ದಿಸಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆಯಷ್ಟೆ ಮತಗಳನ್ನು ಚಲಾಯಿಸುವ ಆದ್ಯತೆ (preference) ಹೊಂದಿರುತ್ತಾನೆ.
- ಈ ಚುನಾವಣೆಯಲ್ಲಿ ಅನುಸರಿಸುವ ಮತದಾನ ಪದ್ದತಿಯು, ಮತ ಪತ್ರಗಳ ಮೇಲೆ 1, 2, 3, ಇತ್ಯದಿಯಾಗಿ ಭಾರತೀಯ ಸಂಖ್ಯಾವಾಚಕ ಅಂತಾರಾಷ್ಟ್ರಿಯ ರೂಪದಲ್ಲಿ ಅಥವಾ ರೋಮನ್ ರೂಪದಲ್ಲಿ ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿ ಬಳಸಲಾಗುವ ಅಂಕಿಗಳರೂಪದಲ್ಲಿ

ಮಾರ್ಕಿಂಗ್ ಮಾಡುವ ಮೂಲಕ ಆಗಿರುತ್ತದೆ. ಇಂತಹ ಆದ್ಯತಾ ಮತವನ್ನು (preference) ಅಕ್ಷರಗಳಲ್ಲಿ ಬರೆಯತಕ್ಕದ್ದಲ್ಲ.

- ಮತಪತ್ರದಲ್ಲಿ ಮತದಾರನು ತನ್ನ ಆದ್ಯತಾ ಮತವನ್ನು ಗುರುತುಮಾಡಲು ಮತಗಟ್ಟೆಯಲ್ಲಿ ಮತಪತ್ರದೊಂದಿಗೆ ಒದಗಿಸಿರುವ ನೇರಳೆ ಬಣ್ಣದ ಸ್ಕೇಚ್‌ಪೆನ್ನ್‌ನ್ನೇ ಬಳಸಬೇಕಾಗುತ್ತದೆ. ಇದರ ಹೊರತಾಗಿ ಇನ್ನಾವುದೇ ಪೆನ್, ಪೆನ್ಸಿಲ್, ಬಾಲ್‌ಪಾಯಿಂಟ್ ಪೆನ್, ಇತ್ಯಾದಿಗಳನ್ನು ಬಳಸಿದರೆ ಅಂತ ಮತಗಳು ಅನೂರ್ಜಿತವಾಗುತ್ತವೆ.
- ಒಂದು ಮತ ಪತ್ರವನ್ನು ಮಾನ್ಯ ಮಾಡಲು ಮತದಾರನು ತನ್ನ ಮೊದಲ ಆದ್ಯತೆ ಮತವನ್ನು ಒಬ್ಬ ಅಭ್ಯರ್ಥಿಯ ಹೆಸರಿನ ಮುಂದೆ '1' ಅಂಕಿಯನ್ನು ಮಾರ್ಕ್ ಮಾಡುವುದು ಅಗತ್ಯವಾಗಿರುತ್ತದೆ. ಉಳಿದ ಆದ್ಯತಾ ಮತಗಳನ್ನು ಗುರುತುಮಾಡುವುದು ಮತದಾರನ ಐಚ್ಛಿಕ ವಿಷಯವಾಗಿದ್ದು ಆತ/ಆಕೆ ಎರಡನೆ ಆದ್ಯತಾಮತ ಮತ್ತು ಉಳಿದ ಆದ್ಯತಾಮತಗಳನ್ನು ಮಾರ್ಕ್ ಮಾಡಬಹುದು ಅಥವಾ ಮಾಡದೆ ಇರಬಹುದು.
- ಸುಪ್ರೀಮ್ ಕೋರ್ಟ್ ಆದೇಶ ದಿನಾಂಕ: 27-9-2013 ಮೇರೆಗೆ, ಮತಪತ್ರದ ಕೊನೆಯಲ್ಲಿ "ನನ್ ಆಫ್ ದಿ ಎಬವ್" (NOTA) ಆಪ್ಷನ್ ಒದಗಿಸಲಾಗಿರುತ್ತದೆ. ಮತಪತ್ರದಲ್ಲಿ ನಮೂದಾಗಿರುವ ಯಾವುದೇ ಅಭ್ಯರ್ಥಿಗೆ ಮತಚಲಾಯಿಸಲು ಇಷ್ಟವಿಲ್ಲದ ಮತದಾರನು ತನ್ನ ತಿರ್ಮಾನವನ್ನು NOTA ಎದುರಿಗೆ (X) ಅಥವಾ (✓) ಮಾಡುವುದು ಅಗತ್ಯವಾಗಿರುತ್ತದೆ. ಈ ಗುರುತುಗಳ ಬದಲಾಗಿ ಇನ್ನಾವುದೇ ಗುರುತುಗಳನ್ನು ಮಾಡಿದರೆ ಅಂತಹ ಮತಪತ್ರವು ಅನೂರ್ಜಿತವಾಗುತ್ತದೆ.
- ಮತದಾರರ ಮಾರ್ಗದರ್ಶನಕ್ಕಾಗಿ ಮತದಾನ ಮಾಡುವ ವಿದಾನದ ಬಗ್ಗೆ ಸೂಚನೆಗಳನ್ನು ಪ್ರತಿ ಮತಗಟ್ಟೆಯ ಪ್ರವೇಶದ್ವಾರದಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳಲ್ಲಾಗಿರುತ್ತದೆ.
- ಪ್ರಜಾಪ್ರತಿನಿಧಿ ಅಧಿನಿಯಮ 1951 ಸೆಕ್ಷನ್ 126ರ ಮೇರೆಗೆ ಮತದಾನ ಪೂರ್ಣಗೊಳ್ಳುವ ದಿನಾಂಕ: 20-06-2014 ರಂದು 48 ಘಂಟೆ ಮುಂಚಿತವಾಗಿ ಅಂದರೆ ದಿನಾಂಕ: 18-06-2014 ಸಂಜೆ 4.00 ಘಂಟೆಗೆ ಚುನಾವಣಾಪ್ರಚಾರವು ಮುಕ್ತಾಯಗೊಳ್ಳುತ್ತದೆ.
- ದಿನಾಂಕ: 20-06-2014 (ಶುಕ್ರವಾರ) ಬೆಳಿಗೆ 8.00 ರಿಂದ ಸಂಜೆ 4.00 ಘಂಟೆವರೆಗೆ ಮತದಾನ ನಡೆಯುತ್ತದೆ.
- ಮತದಾನ ದಿನದಂದು ಸಂಜೆ 4.00 ಘಂಟೆಯೊಳಗೆ ಮತಗಟ್ಟೆಯಲ್ಲಿ ಹಾಜರರಿರುವ ಎಲ್ಲಾ ಮತದಾರರಿಗೂ ಮತಚಲಾಯಿಸುವ ಅವಕಾಶ ನೀಡಲಾಗುತ್ತದೆ.
- ಮತದಾನ ದಿನದಂದು ಮತಚಲಾಯಿಸುವ ಶಿಕ್ಷಕ ಹಾಗೂ ಪದವೀಧರ ಮತದಾರರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲಾಗಿದೆ.

## ಮತ ಎಣಿಕೆ ಕೇಂದ್ರಗಳ ವಿವರಗಳು

| ಕ್ರ.ಸಂ. | ಕ್ಷೇತ್ರದ ಹೆಸರು | ಮತ ಎಣಿಕೆಯ ಸ್ಥಳ | ಮತ ಎಣಿಕೆಯ ಸಮಯ ಮತ್ತು ದಿನಾಂಕ |
|---|---|---|---|
| 1 | ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರ | ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಎತ್ತಿನಗುಡ್ಡ, ಧಾರವಾಡ | 24–06–2014 (ಮಂಗಳವಾರ) ಬೆಳಿಗ್ಗೆ 8.00 ಘಂಟೆಗೆ |
| 2 | ಕರ್ನಾಟಕ ಆಗ್ನೇಯ ಪದವೀಧರ ಕ್ಷೇತ್ರ | ಮಹಾರಾಣಿ ವಿಜ್ಞಾನ ಕಾಲೇಜು, ಅರಮನೆ ರಸ್ತೆ, ಬೆಂಗಳೂರು | |
| 3 | ಬೆಂಗಳೂರು ಶಿಕ್ಷಕರ ಕ್ಷೇತ್ರ | | |
| 4 | ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ | ಭಾಸ್ಕರ್ ಸಭಾಂಗಣ, ಗಣಿತ ವಿಭಾಗ, ಗುಲಬರ್ಗ್ಹ ವಿಶ್ವವಿದ್ಯಾಲಯ, ಗುಲಬರ್ಗ್ಹ | |

- ಚುನಾವಣೆಗೆ ಸ್ಪರ್ದಿಸಿರುವ ಅಭ್ಯರ್ಥಿಗಳು ತಮ್ಮ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದ ಲೆಕ್ಕವನ್ನು ಒಪ್ಪಿಸುವ ನಿಯಮಗಳು ವಿಧಾನಪರಿಷತ್ ಚುನಾವಣೆಗೆ ಅನ್ವಯವಾಗುವುದಿಲ್ಲ.